ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರ ನೇಮಕ ಮಾಡುವ ಸಂದರ್ಭದಲ್ಲಿ ಸೀನಿಯಾರಿಟಿ ಓವರ್ ಲುಕ್‌ಮಾಡಿದ ಸಂದರ್ಭ ಬಂದಾಗ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟ್ರೋಥ ವ್ಯಕ್ತಿ ಅವರು. ನಾಳೆ ೬ನೇ ತಾರೀಖು ಮಂಗಳೂರಿನಲ್ಲಿ ದೊಡ್ಡ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಅವರ ಮನೆತನ ದವರು ಇಟ್ಟುಕೊಂಡಿದ್ದಾರೆ. ಅಖಿಲ ಭಾರತೀಯ ಜನತಾ ಪಾರ್ಟಿ ಉಪಾಧ್ಯಕ್ಷರಾಗಿ ಅವರು ಸೇವೆ ಸಲ್ಲಿಸಿದ್ದನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ೬ನೇ ತಾರೀಖು ನಡೆಯುವ ಶ್ರದ್ಧಾಂಜಲಿ ಕಾರ್ಯಕ್ರಮಕ್ಕೆ ಅಖಿಲ ಭಾರತೀಯ ಜನತಾ ಪಾರ್ಟಿಯ ಅಧ್ಯಕ್ಷರಾದ ಲಾಲ್‌ಕೃಷ್ಣ ಅಡ್ವಾಣಿ ಅವರು ಕೂಡ ಬರುತ್ತಿದ್ದಾರೆ. ಸರ್ಕಾರದ ಗಮನಕ್ಕೆ ಕಳಕಳಿಯಿಂದ ತರುವ ಪ್ರಯತ್ನ ಏನೆಂದರೆ ಅವರು ಶವಸಂಸ್ಕಾರದ ಸಂದರ್ಭದಲ್ಲಿ ಸರ್ಕಾರದ ಸಕಲ ಮರ್ಯಾದೆಯೊಂದಿಗೆ ಕಾರ್ಯಕ್ರಮ ಮಾಡಿದರಂ. ಆ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಬ್ಬರು ಮಂತ್ರಿಗಳಿದ್ದರು. ಸನ್ಮಾನ್ಯ ಮುಖ್ಯಮಂತ್ರಿ ಗಳು ಯಾರಾದರೂ ಒಬ್ಬ ಸಚಿವರನ್ನು ಶವಸಂಸ್ಕಾರದ ಸಂದರ್ಭದಲ್ಲಿ ಕಳುಹಿಸಿಕೊಟ್ಟಿದ್ದರೆ ನಿಜಕ್ಕೂ ಸಹ ಸರ್ಕಾರದ ಕರ್ತವ್ಯ ಸರಿಯಾಗಿ ಮಾಡಿದಂತಾಗುತ್ತಿತ್ತು. ಅನಿವಾರ್ಯವಾದ ಕಾರಣದಿಂದ ಅದು ಆಗದೇ ಇರಬಹುದು. ಕನ್ನಡ ನಾಡಿನ ಶ್ರೇಷ್ಠ ಸುಪುತ್ರರಲ್ಲಿ ದೈವಾಧೀನರಾದಾಗ ಪಕ್ಷಾತೀತವಾಗಿ ನಾವು ಯೋಚನೆ ಮಾಡುತ್ತಿದ್ದೇವೆ. ತತ್ವಕಾಗಿ, ನ್ಯಾಯಕ್ಕಾಗಿ ಹೋರಾಟ ಮಾಡಿದಂಥ ವ್ಯಕ್ತಿ ಅವರು. ತುರ್ತು ಪರಿಸ್ಥಿತಿ ಕಾಲದಲ್ಲಿ ಪೇಜಾವರ ಶ್ರೀಗಳನ್ನು ಮತ್ತು ಇವರನ್ನು ಅರೆಸ್ಟ್ ಮಾಡುವ ಸಂದರ್ಭ ಬಂದಾಗ ಇವರು ಗಂಟುಮೂಟೆ ಕಟ್ಟಿಕೊಂಡು ರೆಡಿಯಾಗಿದ್ದರು. ಶ್ರೀಮಾನ್ ವೀರೇಂದ್ರ ಪಾಟೀಲರಿಗೂ ಇದೇ ಜ್ಞಾಪಕ ಇರಬಹುದು. ಅವರು ದೈವಾಧೀನರಾದ ಮಾರನೆ ದಿವಸ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸುವುದು ನಿಶ್ಚಯವಾಗಿತ್ತು. ನಿಜವಾಗಿ ದೊಡ್ಡವರ ಸಾವು.....

ಶ್ರೀ ವೀರೇಂದ್ರ ಪಾಟೀಲ್.—ಅವತ್ತು ಬಹುಶಃ ನಾನಿರಲಿಲ್ಲ. ಆದರೆ ಅವರ ಶವಸಂಸ್ಕಾರ ಪೂರ್ತಿ ಸರ್ಕಾರದ ಗೌರವದೊಂದಿಗೆ ಮಾಡುವುದಕ್ಕೆ ನಾನು ಹೇಳಿದ್ದೆ. ಆ ರೀತಿಯಾಗಿದೆ. ಅದರಲ್ಲಿ ಯಾವ ರೀತಿಯಲ್ಲೂ ಕಡಿಮೆಯಾಗಿಲ್ಲ.

† ಶ್ರೀ ಬಿ. ಎಸ್. ಯಡಿಯೂರಪ್ಪ.—ಸರ್ಕಾರದ ಸಕಲ ಮರ್ಯಾದೆಯಿಂದ ಶವಸಂಸ್ಕಾರ ಆಯಿತು ಎಂದು ನಾನು ಹೇಳಿದೆ, ಸಹಜವಾಗಿ ರಾಜ್ಯದ ಜನತೆ ಅಪೇಕ್ಷೆ ಪಡುವುದೇನೆಂದರೆ ಯಾರಾ ದರೂ ಒಬ್ಬ ಸಚಿವರು ಆ ಸಂದರ್ಭದಲ್ಲಿ ಹಾಜರಿರಬೇಕು ಎಂದು. ನಾಳೆ ೬ನೇ ತಾರೀಖು ಶ್ರದ್ಧಾಂಜಲಿ ಕಾರ್ಯಕ್ರಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗುತ್ತಿದೆ. ಸಾಧ್ಯವಾದರೆ ಆ ಸಮಯದಲ್ಲಿ ಯಾರಾದರೂ ಮಂತ್ರಿಗಳು ಭಾಗವಹಿಸಬೇಕು ಎಂಬುದನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಹೆಗಡೆ ಅವರಲ್ಲದೆ ನಾಡಿಗೆ ಸೇವೆ ಮಾಡಿದ ಇತರ ಅನೇಕರು ಕಣ್ಮರೆಯಾಗಿದ್ದಾರೆ. ಅವರೆಲ್ಲರ ಆತ್ಮಕ್ಕೆ ಶಾಂತಿ ಕೋರುತ್ತಾ, ಭಾರತೀಯ ಜನತಾ ಪಾರ್ಟಿಯ ಪರವಾಗಿ ಮಾನ್ಯ ಹೆಗಡೆಯವರಿಗೆ ಹಾಗೂ ನಿಧನರಾಗಿ ರುವ ಇತರ ಎಲ್ಲರಿಗೆ ಸಂತಾಪವನ್ನು ವ್ಯಕ್ತಪಡಿಸುತ್ತಾ, ಸನ್ಮಾನ್ಯ ಮುಖ್ಯಮಂತ್ರಿಗಳು ಸಂದರ್ಭೋಚಿತವಾಗಿ ಮಾತನಾಡಿರುವುದರಿಂದ ನಾನು ಹೆಚ್ಚು ಮಾತನಾಡುವ ಅಗತ್ಯ ಇಲ್ಲ. ನಾನೂ ಶ್ರದ್ಧಾಂಜಲಿ ಯನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ದಿವಂಗತರ ಆತ್ಮಕ್ಕೆ ಶಾಂತಿ ಕೋರಲು ಒಂದು ನಿಮಿಷ ಎಲ್ಲರೂ ಎದ್ದುನಿಲ್ಲಬೇಕಾಗಿ ವಿನಂತಿ.

(ಸಭೆ ಒಂದು ನಿಮಿಷ ಮೌನವನ್ನಾಚರಿಸಿತು)

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಈಗಾಗಲೇ ನಾನು ತಮ್ಮಲ್ಲಿ ಮನವಿ ಮಾಡಿದೆ...

ಸಭೆಗೆ ನೂತನ ಮಂತ್ರಿಗಳ ಪರಿಚಯ

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ತಮ್ಮ ಅನುಮತಿ ಕೋರಿ ಮಂತ್ರಿ ಮಂಡಲದಲ್ಲಿ ನೂತನವಾಗಿ ನೇಮಕವಾಗಿರುವಂಥ ನನ್ನ ಸಹದ್ಯೋಗಿಗಳ ಪರಿಚಯವನ್ನು ಸದನಕ್ಕೆ ಮಾಡಿಸಿಕೊಡುವುದಕ್ಕೆ ಇಚ್ಛಿಸುತ್ತೇನೆ. ಮೊದಲನೆಯದಾಗಿ ಶ್ರೀ ಎಸ್. ಬಂಗಾರಪ್ಪನವರು, ಎರಡನೆಯವರು ಶ್ರೀ ಎಂ. ವೈ. ಘೋರ್ಪಡೆಯವರು, ಮೂರನೆಯವರು ಶ್ರೀ ಕೆ. ಎಚ್. ಪಾಟೀಲರು ನಾಲ್ಕನೆಯವರು ಶ್ರೀ ಎಸ್. ಎಂ. ಯಾಹ್ಯಾರವರು ಇವರು ಕ್ಯಾಬಿನೇಟ್ ದರ್ಜೆ ಮಂತ್ರಿಗಳು. ಮತ್ತು ರಾಜ್ಯಸಚಿವರು ಶ್ರೀ ಎಂ. ಎಸ್. ಆತ್ಮಾನಂದ, ಡಾ. ಎಚ್. ಆರ್. ರಾಜು ಅವರು. ಡೆಪ್ಯುಟಿ ಮಿನಿಸ್ಟರ್ ಶ್ರೀಮತಿ ಸುಮಾ ವಸಂತ ಅವರು.

(ಸಭೆಗೆ ಪರಿಚಯಿಸಲಾದ ನೂತನ ಮಂತ್ರಿಗಳು ಒಬ್ಬೊಬ್ಬರಾಗಿ ಎದ್ದುನಿಂತು ಸಭೆಗೆ ವಂದಿಸಿದರು)